# ಮರೆತೆಯೇನೋ ರಂಗ ಮಂಗಳಾಂಗ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 441
2. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 118
3. **Note:** Lyrics given without highlights are as per Ref. 1. The wordings given in yellow highlights are as per Ref. 2.
4. **Note:** Singer has followed lyrics as in Ref. 1.

| | |
|---|---|
| ರಾಗ: ಮೋಹನ ತಾಳ: ಏಕ | ರಾಗ: ಮೋಹನ ತಾಳ: ಆದಿ |
| ಮರೆತೀಯೇನೋ ರಂಗ ಮಂಗಳಾಂಗ ‖ ಪ ‖ | ಮರೆತೆಯೇನೋ ರಂಗ ಮಂಗಳಾಂಗ |
| ಕೋಲು ಕೈಯಲ್ಲಿ ಕೊಳಲು | ಕೋಲು ಕೈಯಲ್ಲಿ ಕೊಳಲು |
| ಜೋಲು ಕಂಬಳಿ ಹೆಗಲ | ಜೋಲುಗಂಬಳಿ ಹೆಗಲ |
| ಮೇಲೆ ಕಲ್ಲಿನ ಚೀಲ ಕಂಕುಳಲಿ | ಮೇಲೆ ಕಲ್ಲಿಯ ಚೀಲ ಕಂಕುಳಲಿ |
| ಕಾಲಿಗೆ ಕಡಗವು ಪಶು ಹಿಂಡು ಲಾಲಿಸುತ | ಕಾಲಿಗೆ ಕಡಗವು ಕಾಯುತ ಹಸು ಹಿಂಡ |
| ಬಾಲಕರ ಮೇಳದೊಳಗಿದ್ದ್ಯಲ್ಲೊ ರಂಗ ‖ 1 ‖ | ಬಾಲಕರ ಮೇಳದಿ ಇದ್ದೆಯೊ ರಂಗ |
| ಕಲ್ಲು ಮಣಿ ಕವಡೆ ಚನ್ನೆ | ಕಲ್ಲು ಮಣಿ ಕವಡೆ ಚೆನ್ನೆ |
| ಗುಲುಗುಂಜಿ ವಡವೆ ಸಾರಲು | ಗುಳ್ಳೆಗುಂಜಿ ಒಡವೆ ಎಲ್ಲವು |
| ನಿನ್ನ ಸರ್ವಾಂಗಕ್ಕೆ | ನಿನ್ನ ಸರ್ವಾಂಗದಲಿ |
| ಅಲ್ಲಲ್ಲಿಗಳವಟ್ಟು ನವಿಲುಗರಿ ದಂಡೆ | ಅಲ್ಲಲ್ಲಿಗಳವಟ್ಟು ನವಿಲುಗರಿ ದಂಡೆ |
| ಅಲ್ಲಿ ಗೊಲ್ಲರ ಕೂಡೆ ಸಲ್ಲಾಪವಾಡುತ ‖ 2 ‖ | ಗೊಲ್ಲ ಮಕ್ಕಳ ಕೂಡೆ ಸಲ್ಲಾಪವಾಡುತೆ |
| ಸಿರಿದೇವಿ ಬಂದು ಸೇರಿದ್ದ ಬಳಿಕ | ಸಿರಿದೇವಿ ಬಂದು ಸೇರಿದ ಬಳಿಕ |
| ಲೋಕದೊಳಗೆ ಸಿರಿಯರಸನೆಂಬುವರು | ಲೋಕದೊಳಗೆ ಸಿರಿಯರಸನೆಂಬುವರು |
| ಪರಮ ಮುಖ್ಯಪ್ರಾಣ ವಂದಿತ | ವರ ಮುಖ್ಯಪ್ರಾಣ ವಂದಿತ |
| ಉಡುಪಿನ ನೆಲೆಯು ಶ್ರೀ | ಉಡುಪಿಯ ಸಿರಿ |
| ಪುರಂದರ ವಿಠ್ಠಲ ಕೃಷ್ಣನೆ ಮರೆತೀಯೆ ‖ 3 ‖ | ಪುರಂದರ ವಿಠ್ಠಲ ಶ್ರೀ ಕೃಷ್ಣ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ತನ್ನನ್ನು ಮರೆತೆ ಏಕೆ? - ಎಂದು ಕೇಳುವ ಭಕ್ತ ಪರ್ಯಾಯವಾಗಿ ಶ್ರೀ ಕೃಷ್ಣನ ಬಾಲಲೀಲೆಗಳನ್ನು ಬಣ್ಣಿಸುತ್ತಾನೆ.

**ಕಲ್ಲಿಯ ಚೀಲ** = ಹೆಣಿಕೆಯ ಚೀಲ

**ಕಲ್ಲು ಮಣೆ** = ಗೊಟ್ಟೆಗುಣಿಯ ಆಟ

**ಕವಡೆ ಚೆನ್ನೆ** = ಕವಡಿಯಿಂದಾಡುವ ಗೊಟ್ಟುಗುಣಿ ಆಟ

**ಅಳವಡು** = ಚೆನ್ನಾಗಿ ಕೂಡಿಕೊಳ್ಳು

**Classification:** Keerthane
**Ankita:** purandara vittala
**Location:** NA
**Category:** Krishna Leele,
**Sub-Category:** ranga, mangala, Krishna, kolalu, kallu, ATa, ADu, hasu, makkalu, gulaganji, navilu, golla, loka, Lakshmi, hanuma, arasa, Udupi,
**Pravachana:** NA
**Explanation:** NA